ಪ್ರಮಾಣಾನುಸಾರ ಪ್ರಾತಿನಿಧ್ಯದ ನಿಯಮಗಳಿಗನುಸಾರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಮಂದಿ ಸದಸ್ಯರನ್ನು ಚುನಾಯಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಗಮನ ಸೆಳೆಯುವ ಸೂಚನೆ

ತೀರ್ಥಹಳ್ಳಿ ತಾಲ್ಲೂಕಿನ ಶೇಡಗಾರ ಗ್ರಾಮದ ಶ್ರೀ ರಾಮನಾಯ್ಕರ ಮನೆಯಲ್ಲಿ ನಡೆದ ಕೊಲೆಯ ಬಗ್ಗೆ

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೭ನೇ ಮೇ ೧೯೮೩ ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ, ಶೇಡ್‌ಗಾರ್ ಗ್ರಾಮದ ಶ್ರೀ ರಾಮನಾಯ್ಕ ಅವರ ಮನೆಯಲ್ಲಿ ನಡೆದ ಕೊಲೆಯ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಇತ್ತೀಚೆಗೆ ನಡೆದ ಮಹತ್ವದ ಘಟನೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಹುದು. ಆದರೆ ಈ ಘಟನೆ ಇತ್ತೀಚೆಗೆ ನಡೆದದ್ದು ಅಲ್ಲ, ಮೇ ತಿಂಗಳಲ್ಲಿ ಆದಂಥ ಘಟನೆ ಇದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಬಹಳ ಕಷ್ಟಪಟ್ಟು ತರಿಸಿದ್ದಾರೆ. ಈ ಪರಿಸ್ಥಿತಿಗೆ ಬರಬೇಕಾದರೆ ಬಹಳ ಕಷ್ಟಪಟ್ಟಿರಬಹುದು. ಅವರು ಈ ವಿಷಯವನ್ನು ಪ್ರತಿದಿವಸವೂ ಎತ್ತುತ್ತಾ ಇದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಇತ್ತೀಚೆಗೆ ನಡೆದ ಘಟನೆ ಎಂದು ಇದೆ, ಆಗಲಿ. ಮಾನ್ಯ ಅಧ್ಯಕ್ಷರೆ ನಾನು ಈ ಒಂದು ಹೇಳಿಕೆಯನ್ನು ಕೊಡುತ್ತೇನೆ.

ದಿನಾಂಕ ೨೮.೫.೧೯೮೩ರ ಬೆಳಿಗ್ಗೆ ಸುಮಾರು ೮ ಗಂಟೆಗೆ ತೀರ್ಥಹಳ್ಳಿ ತಾಲ್ಲೂಕು ಶೇಡಗಾರ್ ಗ್ರಾಮದ ಶ್ರೀ ರಾಮನಾಯ್ಕ ಎಂಬುವರ ಮನೆಗೆ ಬೆಂಕಿ ಬಿದ್ದಿದೆ ಎಂದು ಮಳೂರು ಪೋಲೀಸ್ ಠಾಣೆಗೆ ವರ್ತಮಾನ ಬಂದಿತು, ಕೂಡಲೇ ಪೋಲೀಸರು ಸ್ಥಳಕ್ಕೆ ಧಾವಿಸಿದರು. ಅವರು ಅಲ್ಲಿಗೆ ತಲುಪಿದಾಗ ಮನೆ ಉರಿಯುತ್ತಿತ್ತು, ಮತ್ತು ಸ್ಥಳದಲ್ಲಿ ಇಬ್ಬರು ಹುಡುಗರು ಪ್ರಜ್ಞಾಶೂನ್ಯರಾಗಿ ಮನೆಯ ಹೊರಗೆ ಬಿದ್ದಿದ್ದರು. ಪೋಲೀಸರು ಗ್ರಾಮಸ್ಥರ ಸಹಾಯದಿಂದ ಬೆಂಕಿಯನ್ನು ಆರಿಸಿ ಮನೆಗೊಳಗೆ ಪ್ರವೇಶಿಸಿದಾಗ ಶ್ರೀ ರಾಮನಾಯ್ಕರ ಹೆಂಡತಿಯ ಮತ್ತು ಮಗನ ಸುಟ್ಟು ಹೋದ ಮೃತ ಶರೀರಗಳು ಕಂಡು ಬಂದವು. ಪೋಲೀಸರು ಮೃತ ಶರೀರಗಳ ಮರಣೋತ್ತರ ಪರೀಕ್ಷೆ ಮಾಡಿಸಿದ್ದಾರೆ.

೨. ಶೇಡಗಾರ್ ಗ್ರಾಮದ ಸರ್ವೆ ನಂ. ೬/೨ರಲ್ಲಿರುವ ೨ ಎಕರೆ ೧೫ ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಶ್ರೀಯುತ ಚಂದ್ರಪ್ಪ ಗೌಡ ಮತ್ತು ಶ್ರೀಕೃಷ್ಣಪ್ಪ ಗೌಡ ಇವರೊಡನೆ ತನಗೆ ಜಮೀನು ವಿವಾದ ಇತ್ತೆಂದೂ ಮತ್ತು ಈ ಬೆಂಕಿಯ ಘಟನೆಯಲ್ಲಿ ಇವರ ಕೈವಾಡ ಇದೆ ಎಂದು ಶ್ರೀ ರಾಮಾನಾಯ್ಕರು ಸಂಶಯ ವ್ಯಕ್ತಪಡಿಸಿದರು ಅವರ ಕಡೆಯಿಂದ ದೂರು ತೆಗೆದುಕೊಂಡು ಮಳೂರು ಪೋಲೀಸ್ ಠಾಣೆಯಲ್ಲಿ ಭಾರತ ದಂಡ ಸಂಹಿತೆ ಕಲಂ ೪೪೭, ೩೨೪, ೩೨೬, ೫೦೨, ೪೫೬ ಮತ್ತು ೩೪ರ ಪ್ರಕಾರ ಮೊಕದ್ದಮೆ ನಂ. ೩೨/೮೩ ದಾಖಲು ಮಾಡಿಕೊಳ್ಳಲಾಯಿತು. ಸರ್ಕಲ್ ಇನ್ಸ್‌ಪೆಕ್ಟರ್‌ರವರು ತನಿಖೆಯನ್ನು ವಹಿಸಿಕೊಂಡು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರ್ ಪಡಿಸಿದರು. ಅವರನ್ನು ನ್ಯಾಯಿತ ಅಭಿರಕ್ಷೆಗೆ ಒಪ್ಪಿಸಲಾಗಿದೆ. ಮುಂದಿನ ತಪಾಸಣೆಯನ್ನು ಶಿವಮೊಗ್ಗದ ಸಬ್ ಡಿವಿಜನಲ್ ಪೋಲೀಸ್ ಅಧಿಕಾರಿ ವಹಿಸಿಕೊಂಡಿದ್ದಾರೆ, ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣ ಪಟ್ಟಿಯನ್ನು ಈಗಾಗಲೇ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ.

೩. ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ೧೦,೦೦೦ ರೂಪಾಯಿಗಳನ್ನು ಪರಿಹಾರ ರೂಪವಾಗಿ ಶ್ರೀ ರಾಮಾನಾಯ್ಕ ಇವರಿಗೆ ಕೊಡಲಾಗಿದೆ. ಇದರ ಹೊರತಾಗಿ ಮಾನ್ಯ ಈ ಸದನದ

ಅಧ್ಯಕ್ಷರು, ಈ ಘಟನೆ ಆದಮೇಲೆ ಕೆಲವು ದಿವಸಗಳಲ್ಲಿ ನನಗೆ ಫೋನ್ ಮಾಡಿದರು, ಈ ರೀತಿ ಒಂದು ಅನಾಹುತವಾಗಿದೆ, ಈ ರೀತಿ ಮಕ್ಕಳು ಅನಾಥರಾಗಿದ್ದಾರೆ, ಅವರಿಗೆ ಏನಾದರೂ ಸಹಾಯ ಮಾಡ ಬೇಕು ಎಂದು ಹೇಳಿದರು ಇಂತಹ ಘಟನೆ ಆದರೆ ನಮ್ಮ ಸರ್ಕಾರದಿಂದ ನೇರವಾಗಿ ಯಾವ ರೀತಿಯು ಸಹಾಯ ಮಾಡುವುದಕ್ಕೆ ಆಸ್ಪದವಿಲ್ಲ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಈ ಮಕ್ಕಳಿಗೆ ೧೦ ಸಾವಿರ ರೂಪಾಯಿಗಳಷ್ಟು ಹಣವನ್ನು ಕೊಡಲಿಕ್ಕೆ ಕಳಿಸಿಕೊಟ್ಟಿದ್ದೇವೆ. ಇದಕ್ಕಿಂತ ಹೆಚ್ಚು ಹೇಳುವುದು ಮತ್ತೆ ಏನಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಈ ಹೇಳಿಕೆಯಲ್ಲಿ ೨೮ನೇ ತಾರೀಖು ಬೆಳಿಗ್ಗೆ ೮ ಗಂಟೆಗೆ ಎಂದು ಇದೆ. ಇದು ಸತ್ಯಕ್ಕೆ ಬಹಳ ದೂರವಾದ ವಿಚಾರ. ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ಹೇಳಿದರು. ಈ ವಿಚಾರವನ್ನು ಇಷ್ಟು ದಿವಸ ಆದಮೇಲೆ ಸಭೆಯಲ್ಲಿ ಎತ್ತುವುದು ಅಷ್ಟೊಂದು ಸೂಕ್ತವಲ್ಲ ಎಂದು ಹೇಳಿದರು. ಈ ಸದನ ಸೇರುವುದಕ್ಕೆ ೧೫ ದಿವಸ ಮೊದಲೇ ನಿಯಮ ಪುಸ್ತಿಕೆಯ ಪ್ರಕಾರ ನೋಟೀಸ್ ಕಳಿಸಿದ್ದೇನೆ. ಇದಕ್ಕೆ ಈ ದಿವಸ ಪ್ರಾತಿನಿಧ್ಯ ಸಿಕ್ಕಿತು. ನಮ್ಮ ವಿರೋಧಪಕ್ಷದ ನಾಯಕರು ಒತ್ತಾಯ ಮಾಡಿ ನನ್ನ ಪರವಾಗಿ ಕೇಳಿಕೊಂಡಿದ್ದರಿಂದ ಇವತ್ತಿನ ದಿವಸ ಇದಕ್ಕೆ ಪ್ರಾತಿನಿಧ್ಯ ಸಿಕ್ಕಿತು. ಈಗಲಾದರೂ ಅವಕಾಶ ಬಂತಲ್ಲ, ಅದಕ್ಕೆ ಅಭಿನಂದನೆ ಹೇಳುತ್ತೇನೆ. ಇದು ಬಹಳ ಲಘುವಾಗಿದ್ದರೂ ಕೂಡ ಜಮೀನುದಾರರಿಗೆ ಬಹಳ ಲಘುವಾಗಿ ಕಾಣುತ್ತದೆ. ಆದರೆ ಗೇಣಿದಾರರಿಗೆ ಇದು ಬಹಳ ದೊಡ್ಡ ವಿಚಿತ್ರವಾಗಿದೆ. ಅಲ್ಲಿ ಊರನ್ನೇ ಬಿಟ್ಟು ಹೋಗುವ ಬೆಂಕಿಗೆ ಆಹುತಿಯಾಗುವ ಪ್ರಸಂಗ ಬಂದಿದೆ ಎಂದು ನಾನು ಗೇಣಿದಾರರ ಪರವಾಗಿ ವೈಚಾರಿಕ ಮಾಡಿ ಚಿಂತನೆ ಮಾಡುತ್ತಾ ಇದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಇದು ಅಷ್ಟೊಂದು ಪ್ರಾಮುಖ್ಯವಾದ ವಿಚಾರ ಆಲ್ಲದೇ ಹೋದರೂ ಕೂಡ ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಎಲ್ಲಾ ಗೇಣಿದಾರರು ಕೂಡ ಕೊಬ್ಬಿದ ಜಮೀನುದಾರರ ಹಾವಳಿಯಿಂದಾಗಿ ಹೆದರಿಕೆಯಿಂದ ನಡುಗಿ ಕುಳಿತ್ತಿದ್ದಾರೆ. ಇವತ್ತು ಜಮೀನ್ದಾರರು ಗದ್ದೆಗೆ ಇಳಿಯಬಾರದು ಎಂದರೆ ಯಾರೂ ಇಳಿಯುವುದಕ್ಕೆ ತಯಾರಿಲ್ಲ, ಅಷ್ಟೊಂದು ಜನ ಹೆದರಿದ್ದಾರೆ. ಪ್ರತಿ ದಿವಸ ಪ್ರಕರಣ ಏನಾಯಿತು ಎಂದು ಪತ್ರಗಳು ಬರುತ್ತಿವೆ. ನಾವು ಆಗಲೇ ಆ ಸ್ಥಳಕ್ಕೆ ಹೋಗಿ ಬಂದಿದ್ದೇವೆ. ಬಹುಶಃ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಿಲ್ಲವೆಂದು ಕಾಣುತ್ತದೆ. ಅಧ್ಯಕ್ಷರು ಹೋಗಿದ್ದಾರೆ, ಅದು ಅಧ್ಯಕ್ಷರ ಕ್ಷೇತ್ರವೂ ಹೌದು.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಇಲ್ಲಿ ಹೆಚ್ಚು ಚರ್ಚೆಗೆ ಆಸ್ಪದ ಇಲ್ಲವೆಂದು ನನ್ನ ಅಭಿಪ್ರಾಯ. ಈಗಾಗಲೇ ೩ ಜನ ಆರೋಪಿಗಳನ್ನು ಬಂದನದಲ್ಲಿ ಇಟ್ಟಿದ್ದೇವೆ. ಚಾರ್ಜ್‌ಷೀಟ್ ಹಾಕಿ ಸೆಷನ್ ಕೋರ್ಟಿಗೆ ಕಳುಹಿಸಲಾಗಿದೆ. ಇಂಥ ಸಮಯದಲ್ಲಿ ಈ ವಿಷಯವನ್ನು ಇಲ್ಲಿ ಚರ್ಚೆ ಮಾಡಿದರೆ ರೂಲ್ಸ್‌ಗೆ ವಿರೋಧವಾಗುತ್ತದೆ. ದಯವಿಟ್ಟು ಸದಸ್ಯರು ಇದನ್ನು ತಿಳಿದುಕೊಳ್ಳಬೇಕು.

ಶ್ರೀ ಬಿ. ಸ್ವಾಮಿರಾವ್.—ಇಲ್ಲಿ ಕೊಟ್ಟಿರತಕ್ಕ ಹೇಳಿಕೆಯಲ್ಲಿ ೨೮ರಂದು ಬೆಳಿಗ್ಗೆ ೮ ಗಂಟೆಗೆ ಬಿದ್ದ ಬೆಂಕಿಯನ್ನು ಊರಿನವರು ಮತ್ತು ಪೋಲೀಸರು ಸೇರಿಕೊಂಡು ಆರಿಸಿದ್ದಾರೆ.

ಉಪಾಧ್ಯಕ್ಷರು.—ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅಪರಾಧಿಗಳನ್ನು ಗುರುತಿಸಿ ಚಾರ್ಜ್ ಷೀಟ್ ಹಾಕಿ ಸೆಷನ್ ಕೋರ್ಟಿಗೆ ಕಳುಹಿಸಿರಬೇಕಾದರೆ ಅದನ್ನು ಈ ಸದನದಲ್ಲಿ ಚರ್ಚೆ ಮಾಡುವುದು ಹೇಗೆ ? ಮಾನ್ಯ ಬಂಗಾರಪ್ಪನವರು ವಕೀಲರಾಗಿದ್ದವರು.

ಶ್ರೀ ಬಿ. ಸ್ವಾಮಿರಾವ್.—ಅಪರಾಧಿಗಳನ್ನು ಬಿಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ವಿಚಾರ ನ್ಯಾಯಾಲಯದಲ್ಲಿರುವುದರಿಂದ ಅದರ ವಿವರಕ್ಕೆ ಹೋಗುವುದಿಲ್ಲ. ಇದಕ್ಕೆ ಕಾನೂನು ಪ್ರಕಾರ ಪ್ರತಿಬಂಧಕ ಇದೆ ಎಂಬುವುದನ್ನು ಒಪ್ಪುತ್ತೇನೆ. ಆದರೆ ತನಿಖೆ ಮಾಡತಕ್ಕ ಕಾಲದಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಬಹುದು. ಪ್ರತ್ಯಕ್ಷ ಸಾಕ್ಷಿ ಇರತಕ್ಕ ಕೇಸು ಇದು. ಯಾರು ಯಾರ ಹೆಸರುಗಳನ್ನ ಕೊಟ್ಟರೋ ಅದನ್ನು ಬಿಟ್ಟು ಇವರು ಚಾರ್ಜ್ ಷೀಟ್ ಹಾಕಿದ್ದಾರೆಂದು ಇದೆ. ಭೂ ಮಾಲೀಕರು ಗೇಣಿದಾರರನ್ನು ಕೊಲೆ ಮಾಡಿ ಮನೆಗೆ ಬೆಂಕಿ ಹಾಕಿ ಸುಟ್ಟಿರತಕ್ಕ ಪ್ರಕರಣ ಇದು, ನಾನು ಸ್ಥಳಕ್ಕೆ ಹೋಗಿದ್ದೆ. ಅಲ್ಲಿ ಉಳಿದಿರತಕ್ಕದ್ದು ಎಲುಬುಗಳು ಮಾತ್ರ. ಬೂದಿ ಕೆದರಿದರೆ ಎಲುಬಿನ ತುಂಡುಗಳು ಸಿಕ್ಕುತ್ತವೆ. ಆಲ್ಲಿ ಪ್ರತ್ಯಕ್ಷ ಸಾಕ್ಷಿಗಳಾಗಿ ಏನು ಉಳಿದಿದ್ದಾರೆ ಅವರು ಚಾರ್ಜ್ ಷೀಟ್‌ನಲ್ಲಿ ಬಂದಿಲ್ಲವೆಂದು ಇದೆ. ಉಳಿದವರು ಏನಾದರೂ ಎಂಬುದು ಸ್ಥಳಕ್ಕೆ ಹೋದರೆ ಗೊತ್ತಾಗುತ್ತದೆ. ಸತ್ತವರು ಸತ್ತರು ; ಉಳಿದವರು ಶಕ್ತಿವಂತರಾದರೆ ಸೇಡು ತೀರಿಸಿಕೊಳ್ಳುತ್ತಾರೆ. ಬಡವರಾದರೆ ಯಾವ ರೀತಿ ತೀರಿಸಿಕೊಳ್ಳುತ್ತಾರೆ ? ಆ ದಿನ ಹೇಳುತ್ತಿದ್ದರು,

೩೦ನೇ ಸೆಕ್ಷನ್ ಜಾರಿಗೆ ಬರುವುದು ಹೊಡೆದ ಮೇಲೆ ಎಂದು. ಹೊಡೆದರೆ ಪ್ರತಿಬಂಧಕ ಬರುತ್ತದೆ. If a person, who is very much aggrieved, takes law into his own hands and then starts dealing with the persons concerned, what will happen ? ತಪ್ಪು ಎಂಬ ಭಾವನೆ ಬಂದರೂ ಮನುಷ್ಯನನ್ನು ಆ ಮಟ್ಟಕ್ಕೆ ನೂಕಬಾರದೆಂದು ಕಾನೂನಿನಲ್ಲಿದೆ. ರಾಮನಾಯಕ ಅನೇಕ ವರ್ಷಗಳಿಂದ ಭೂಮಿ ಮಾಡಿಕೊಂಡು ಇದ್ದ. ನನ್ನ ಜೊತೆಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ಎಲ್ಲಾ ಬಂದಿದ್ದರು. ಅವನಿಗೆ ಇವತ್ತು ಭೂಮಿ ಇಲ್ಲದಂತೆ ಮಾಡಿ ಕುಡಿಯುವುದಕ್ಕೆ ನೀರು ಇಲ್ಲದಂತೆ ಮಾಡಿ ಇದ್ದ ಬಾವಿಯನ್ನು ಮುಚ್ಚಿದ್ದಾರೆ. ೨೫ ವರ್ಷದ ತೆಂಗಿನ ಮರಗಳು ಸುಟ್ಟು ಕಾಯಿಗಳು ಬೀಳುತ್ತಿದ್ದವು. ಬಾವಿ ಮುಚ್ಚಿದ್ದಾರೆ, ಬೇಲಿಯನ್ನು ಆತನ ಮನೆ ಬಾಗಿಲ ಹತ್ತಿರ ತಂದಿದ್ದಾರೆ.

ಉಪಾಧ್ಯಕ್ಷರು.—ಕೇಸ್ ಬಿಲ್ಟ್ ಅಪ್ ಮಾಡಬೇಕಾದರೆ ಎಲ್ಲವನ್ನು ತೆಗೆದುಕೊಂಡು ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ರಾಮನಾಯಕನ ಹೆಂಡತಿ ಮತ್ತು ಒಂದು ಚಿಕ್ಕ ಮಗು ಬಚಾವ್ ಆಗಿದ್ದಾರೆ. ಅವರು ಆ ಸಂದರ್ಭದಲ್ಲಿ ನೀಟರ ಮನೆಗೆ ಹೋಗಿದ್ದರು. ಡಿ. ವೈ. ಎಸ್. ಪಿ. ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರ್ ಮತ್ತು ನಾವು ಸೇರಿ ಒಂದು ತೀರ್ಮಾನ ಮಾಡಿದ್ದೇವೆ. ಕಾನೂನು ಪ್ರಕಾರ ಚಾರ್ಜ್ ಷೀಟ್ ಹಾಕಲಿ. ಅವನಿಗೆ ಬಾವಿ ತೋಡಿಸಿಕೊಡಬೇಕು. ಈಗ ನೀರ ತರಿಸಿಕೊಡಬೇಕಾದರೆ ಭೂಮಾಲೀಕರ ಜಾಗಕ್ಕೆ ಹೋಗಬೇಕಾಗಿದೆ. ನಾವು ಬೇಕಾದಷ್ಟು ಬದಲಾವಣೆಗಳನ್ನು ಮಾಡುತ್ತೇವೆ, ಗೇಣಿದಾರರಿಗೆ ರಕ್ಷಣೆ ಕೊಡುತ್ತೇವೆಂದು ಈ ಸರ್ಕಾರ ಹೇಳಿತ್ತು. ಚಾರ್ಜ್ ಷೀಟ್ ಹಾಕುವುದು ಎಷ್ಟು ಮುಖ್ಯವೋ, ಬಾವಿ ತೋಡಿಸುವುದು ಅಷ್ಟೇ ಮುಖ್ಯ. ಅಲ್ಲಿರತಕ್ಕ ಬೇಲಿಯನ್ನು ಜರುಗಿಸಿ ಕುಡಿಯುವ ನೀರಿಗೆ ಅವಕಾಶ ಮಾಡಿಕೊಡಬೇಕು. ಕೇಸು ಟ್ರಿಬ್ಯುನಲ್‌ನಲ್ಲೂ ಅವನಂತೆ ಆಗಿದೆ ಮತ್ತೆ ಹೈಕೋರ್ಟಿನಲ್ಲಿ ಕೂಡ ಅವನಂತೆ ಆಗಿದೆ. ಇಷ್ಟಾದರೂ ಆ ಜಾಗಕ್ಕೆ ಹೋಗಿ ಗಲಾಟೆ ಮಾಡಿದ್ದಾರೆ. ಜಡ್ಜ್‌ಮೆಂಟ್ ಅವನಂತೆ ಇದ್ದರೂ ಮಗಳನ್ನು ಕಳೆದುಕೊಂಡ, ಅವನಿಗೆ ಇವತ್ತು ಜಮೀನು ಇಲ್ಲ, ಕುಡಿಯುವುದಕ್ಕೆ ನೀರೂ ಇಲ್ಲವಾಗಿದೆ. ಹೀಗಾದರೆ ಸರ್ಕಾರ ಏನು ರಕ್ಷಣೆ ಕೊಟ್ಟಂತಾಯಿತು ? ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ, ದಯಮಾಡಿ ಆ ಬಾವಿ ತೋಡಿಸತಕ್ಕ ಕೆಲಸವನ್ನು ಸರ್ಕಾರವೇ ತನ್ನ ಖರ್ಚಿನಲ್ಲಿ ಮಾಡಿಸಿಕೊಡಬೇಕು. ೫–೬ ಅಡಿ ತೋಡಿದರೆ ನೀರು ಬರತಕ್ಕ ಸ್ಥಳ ಅದು. ಅವನು ಆ ಜಾಗಕ್ಕೆ ಹೋಗಿ ಗದ್ದೆಯಾಗಿ ಮಾಡುವುದಕ್ಕೆ ಅವಕಾಶ ಆಗಬೇಕು. ಅವನಿಗೆ ರಕ್ಷಣೆ ಕೊಟ್ಟು ಫಸಲು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಎಂದು ತೀರ್ಮಾನ ಮಾಡಿಸಿ ಬಂದಿದ್ದೆ. ಅದು ಮಾನ್ಯ ಚಿಂದ್ರೇಗೌಡರ ಕ್ಷೇತ್ರ. ತೀರ್ಮಾನ ಮಾಡಿದ್ದನ್ನು ಹಾಳು ಮಾಡಿ, ಬಾವಿಯನ್ನು ತೋಡದೆ ಜಮೀನಿಗೆ ನೀನು ಕೆಲಸ ಹಾಕಬೇಡ ಎಂದು ಪೊಲೀಸರು ಹೆದರಿಸಿ ಕಾದರೆ ಇದರ ಅರ್ಥವೇನು ? ಚಾರ್ಜ್ ಷೀಟಿನಲ್ಲಿ ಇದೆಲ್ಲ ಬರುತ್ತದೆಯೆ ? ಇದಕ್ಕೆ ಸರ್ಕಾರ ಏನು ರಕ್ಷಣೆ ಕೊಟ್ಟಿದೆ ? ಕೊನೆಯ ಪಕ್ಷ ಅವನಿಗೆ ಒಂದು ಬಾವಿ ತೋಡಿಸಿಕೊಟ್ಟರೆ ನೆಲಗಡಲೆಯನ್ನಾದರೂ ಹಾಕಿಕೊಂಡು ಜೀವನಕ್ಕೆ ಅವಕಾಶ ಮಾಡಿಕೊಳ್ಳುತ್ತಾನೆ. ಇವತ್ತು ಅವನು ಬಿದಿ ಭಿಕಾರಿಯಾಗಿದ್ದಾನೆ. ಸರ್ಕಾರ ರಕ್ಷಣೆಕೊಡುವುದು ಇದ್ದರೆ ಅಂಥ ವ್ಯಕ್ತಿಗಳಿಗೆ ಕೊಟ್ಟು ಶಭಾಶ್‌ಗಿರಿ ತೆಗೆದುಕೊಳ್ಳಬೇಕು. ಇದರ ಬಗ್ಗೆ ಮುಖ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಅನಾಥರಾದವರಿಗೆ ಹೆಚ್ಚು ಆರ್ಥಿಕ ಸಹಾಯ ಕೊಡಬೇಕೆಂದು ಸೂಚನೆ ಬಂದಿದೆ. ಸರ್ಕಾರದ ನಿಯಮದ ಪ್ರಕಾರ ಯಾವರೀತಿ ಬಾವಿ ತೋಡಿಸುವುದಕ್ಕಾಗಲಿ ಅಥವಾ ದಂಡ್ಡಿ ಕೊಟ್ಟು ಸಹಾಯ ಮಾಡುವುದಕ್ಕಾಗಲಿ ಬರುತ್ತದೆ ಎಂಬುದನ್ನು ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಬಾವಿ ತೋಡಿಸುವುದು ಅಷ್ಟೇ ಅಲ್ಲ.

ಉಪಾಧ್ಯಕ್ಷರು.— ಈಗ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಬಾವಿ ತೋಡಿಸುವುದನ್ನು ಯೋಚನೆ ಮಾಡುತ್ತೇವೆ, ರಕ್ಷಣೆ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ನಾನು ತೀರ್ಮಾನ ಮಾಡಿಸಿ ಬಂದಿದ್ದೇನೆ. ತೀರ್ಮಾನವಾಗಿರತಕ್ಕ ವಿಚಾರಕ್ಕೆ ಅವಕಾಶ ಕೊಡುತ್ತಿಲ್ಲ. ಮತ್ತೆ ಪೊಲೀಸರು ಜಮೀನ್ದಾರರ ಜೊತೆಗೆ ಶಾಮೀಲಾಗಿದ್ದಾರೆ. ಅದನ್ನು ಮುಖ್ಯಮಂತ್ರಿಗಳು ತಿಳಿವಳಿಕೆ ಕೊಟ್ಟು ಮಾಡಿಸಬೇಕು. ಬೇಲಿ ತೆಗೆಸಿ ಭೂಸ್ವಾಧೀನಕ್ಕೆ ಕೊಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಜಡ್ಜ್‌ಮೆಂಟ್ ಏನಿದೆ ಅದನ್ನು ಸರ್ಕಾರ ಸಪೋರ್ಟ್ ಮಾಡ

ಬೇಕು. ಮತ್ತೆ ಭೂಮಿಯನ್ನು ಅವನ ಸ್ವಾಧೀನಕ್ಕೆ ಕೊಡಲಿ, ಪೋಲೀಸರನ್ನು ಹಾಕಲಿ, ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿ. ಇದರ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ ಬಯಸುತ್ತೇನೆ.

ಉಪಾಧ್ಯಕ್ಷರು.— ಬಾವಿ ತೋಡಿಸುವ ಮತ್ತು ಪರಿಹಾರ ಕೊಡುವ ಬಗ್ಗೆ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.— ಆ ಕುಟುಂಬಕ್ಕೆ ಆದಂತಹ ಅನ್ಯಾಯದ ಬಗ್ಗೆ ಸಂಪೂರ್ಣ ಸಹಾನುಭೂತಿ ಸರ್ಕಾರಕ್ಕೆ ಇದೆ. ಇಲ್ಲಿ ರೂಲ್ಸಿಗೆ ವಿರೋಧವಾಗಿ ಮಾಡುತ್ತೇವೆಂದು ಹೇಳಲಾರೆ. ಕೊ ರ್ಟ್ ಜಡ್ಜ್‌ಮೆಂಟನ್ನು ನೋಡಿಸುತ್ತೇನೆ. ಆದರ ಪ್ರಕಾರ ಮಾಡುವುದಕ್ಕೆ ಬರುವುದಿದ್ದರೆ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.— ಗೇಣಿದಾರರಿಗೆ ರಕ್ಷಣೆ ಇದೆ ಎಂದು ಹೇಳಲಿ.

ಉಪಾಧ್ಯಕ್ಷರು.— ಕಾನೂನು ಪ್ರಕಾರ ಏನು ರಕ್ಷಣೆ ಕೊಡಬೇಕೊ ಆ ಪ್ರಕಾರ ಕೊಡುತ್ತೇವೆಂದು ಹೇಳಿದ್ದಾರೆ, ಅದಕ್ಕಿಂತ ಹೆಚ್ಚಿಗೆ ಏನು ಬೇಕು?

ಶ್ರೀ ಕೆ. ಶಿವಮೂರ್ತಿ.— ಆ ವರ್ಗದಲ್ಲಿ ಹುಟ್ಟಿದ್ದರಿಂದ ನೋವಾಗುತ್ತಿದೆ.

ಉಪಾಧ್ಯಕ್ಷರು.— ಕಾನೂನು ಪ್ರಕಾರ ರಕ್ಷಣೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಆರ್.ಎನ್. ನಾಯಕ್.— ರಾಜ್ಯದಲ್ಲಿ ಆರ್ಥ ಘಟನೆ ಮತ್ತೆ ಮರುಕಳಿಸಬಾರದು. ನಮಗೆ ಹೊಟ್ಟೆಯಲ್ಲಿ ನೋವಿದೆ.

ಉಪಾಧ್ಯಕ್ಷರು.— ಅದು ರಿಪಿಟಿಷನ್ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಜಡ್ಜ್‌ಮೆಂಟ್ ಪ್ರಕಾರ ಕೊಡುತ್ತೇವೆಂದು ಹೇಳಿದಮೇಲೆ ಇನ್ನೇನು ಭರವಸೆ ಕೊಡುವುದಕ್ಕೆ ಸಾಧ್ಯ? ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ, ನೋಡಿಕೊಳ್ಳುತ್ತಾರೆ. At a meeting of the Leaders of the Parties held tody, it was decided that the House will transact the following business from 17th to 23rd September, 83.

17-9-83 Demands relating to Social Welfare, Sericulture, etc., and Forest Dept.

19-9-83 Demands relating to Agriculture and Health Dept.

20th and 21st Demands relating the Hon'ble Chief Minister.

22nd Reply by the Hon'ble Chief Minister and Demands relatiug to Industries Minister.

The quetion hour will be dispensed with on this day.

23rd Morning sittings: Appropriaton Bill.

26th and 27th Legislative Business as decided earlier.

The House stands adjourned to meet tomorrow at 9 A.M.

The House adjourned at Fifty three minutes past Five of the (Clock to meet again on Saturday, the 17th September, 1983 at Nine of the Clock.)